KACN020017402025

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ, ಚಾಮರಾಜನಗರ.**

**ದಿನಾಂಕಃ 02ನೇ ಜುಲೈ ಮಾಹೆ 2026**

**ಉಪಸ್ಥಿತರು**

**ಶ್ರೀ ಪ್ರಕಾಶ್ .ಸಿ.ಡಿ,** ಬಿ.ಎ. ಎಲ್ ಎಲ್. ಬಿ.,
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.
ಚಾಮರಾಜನಗರ.

**ಸಿ ಸಿ ಸಂ. 891/2025**

**ಫಿರ್ಯಾದುದಾರರು** : **ಸರ್ಕಾರದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ**
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

:: **ವಿರುದ್ಧ** ::

**ಆರೋಪಿ** : **ನಾಗಪ್ಪ**
ಬಿನ್ ಸಿದ್ದಪ್ಪ
ವಯಸ್ಸು 34 ವರ್ಷ
ವಾಸಃ ಕೀಳಲಿಪುರ ಗ್ರಾಮ,
ಚಾಮರಾಜನಗರ ತಾಲ್ಲೂಕು.
**(ಆರೋಪಿ ಪರಃ ಶ್ರೀ. ಎ..ಎಸ್.ಎಸ್.ಆರ್., ವಕೀಲರು)**

(ಈ ಪ್ರಕರಣವು ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯ, ಚಾಮರಾಜನಗರ ರವರಿಂದ ಈ ನ್ಯಾಯಾಲಯಕ್ಕೆ ವರ್ಗಾವಣೆಗೊಂಡಿರುತ್ತದೆ.)

**ಘಟನೆಗಳ ವಿವರಃ**

| | | |
|---|---|---|
| ಕೃತ್ಯ ನಡೆದ ದಿನಾಂಕ | : | 22.03.2019 |
| ಪ್ರಕರಣ ದಾಖಲಾದ ದಿನಾಂಕ | : | 12.06.2019 |
| ಪ್ರಕರಣದ ಸ್ವರೂಪ | : | ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32, 34 |
| ವಿಚಾರಣೆ ಪ್ರಾರಂಭವಾದ ದಿನಾಂಕ | : | 09.10.2024 |
| ವಿಚಾರಣೆ ಮುಕ್ತಾಯವಾದ ದಿನಾಂಕ | : | 22.03.2019 |
| ತೀರ್ಪು ನೀಡಿದ ದಿನಾಂಕ | : | **02.07.2026** |
| ಪ್ರಕರಣದ ಒಟ್ಟು ಕಾಲಾವಧಿ | : | ವರ್ಷ 7, ತಿಂಗಳು –, ದಿನ 20 |

**(ಶ್ರೀ ಪ್ರಕಾಶ್. ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ.**

**:: ತೀರ್ಪು ::**

ಆರೋಪಿ ವಿರುದ್ಧ ಉಪ ನಿರೀಕ್ಷಕರು, ಗ್ರಾಮಾಂತರ ಪೊಲೀಸ್ ಠಾಣೆ, ಚಾಮರಾಜನಗರ ರವರು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ. 32, 34 ರಡಿಯಲ್ಲಿ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ.**

ದಿನಾಂಕ: 22.03.2019 ರಂದು ಮಧ್ಯಾಹ್ನ 1.40 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ್ದು, ಚಾಮರಾಜನಗರ ತಾಲ್ಲೂಕು, ಕಿಳಲೀಪುರ ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ಆರೋಪಿಯು ಯಾವುದೇ ರಹದಾರಿಯಿಲ್ಲದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ 90 ಎಂಎಲ್ ನ 10 ಓರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಹಾಗೂ 90 ಎಂ.ಎಲ್ ನ 20 ಹೈವಾರ್ಡ್ಸ್ ಚೀಯರ್ಸ್ ವಿಸ್ಕಿಯ ಮದ್ಯ ತುಂಬಿರುವ 20 ಪೌಚ್‌ಗಳನ್ನು ತನ್ನ ಕೈಯಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಹಿಡಿದುಕೊಂಡು ಸಾಗಾಣಿಕೆ ಮಾಡುತ್ತಿದ್ದುದು, ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ.32, 34 ರಡಿಯಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಯವರು ಅಪರಾಧ ಸಂಖ್ಯೆ 76/2019 ರಂತೆ ಪ್ರಕರಣವನ್ನು ನೋಂದಾಯಿಸಿ ನಂತರ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಯು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ. 32, 34 ರಡಿಯಲ್ಲಿ ಸಂಜ್ಞೆಯನ್ನು ತೆಗೆದುಕೊಂಡಿರುತ್ತದೆ.

**4.** ಆರೋಪಿಯು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ. ಆರೋಪಿತಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ಅಭಿಯೋಜನೆಯ ದಾಖಲೆಗಳನ್ನು ಪೂರೈಸಲಾಗಿದೆ. ನಂತರ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ. 32, 34 ರ ಅಡಿಯಲ್ಲಿ ಆರೋಪಿ ವಿರುದ್ಧ ಆಪಾದನೆಯನ್ನು ರಚಿಸಿ ಓದಿ ಹೇಳಲಾಗಿರುತ್ತದೆ. ಆರೋಪಿಯು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**5.** ನಂತರ ಅಭಿಯೋಜನೆಯವರು ತಮ್ಮ ಪರ ಫ್ರಾಸಾ 1 ರಿಂದ 5 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 7ರವರೆಗೆ ನಿಶಾನೆಗಳನ್ನಾಗಿ ಹಾಗೂ 30 ಮದ್ಯದ ಪೌಚುಗಳನ್ನು ಹಾಗೂ ಒಂದು ಪ್ಲಾಸ್ಟಿಕ್ ಕವರ್ ಮುದ್ದೆ ಮಾಲು-1 ರಿಂದ 31 ಎಂದು ಗುರ್ತಿಸಿಕೊಂಡಿರುತ್ತಾರೆ. ನಂತರ ಆರೋಪಿ ವಿರುದ್ಧ ದಂ.ಪ್ರ.ಸಂ.ಕಲಂ 313 ರ ರೀತ್ಯಾ ಪಡೆದುಕೊಳ್ಳಬೇಕಾದ ಆರೋಪಿ ಹೇಳಿಕೆಯನ್ನು ತೆಗೆದುಕೊಳ್ಳಲಾಯಿತು, ಆರೋಪಿಯು ಸಾಕ್ಷ್ಯದಾರರು ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ. ಆರೋಪಿಯು ತಮ್ಮ ಪರವಾಗಿ ಸಾಕ್ಷಿಯನ್ನು ಮಂಡಿಸಿರುವುದಿಲ್ಲ ಮತ್ತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

**6.** ಅಭಿಯೋಜನೆ ಹಾಗೂ ಆರೋಪಿ ಪರವಾಗಿ ವಾದವನ್ನು ಆಲಿಸಲಾಯಿತು. ಕೆಳಕಂಡ ಅಂಶಗಳು ಪ್ರಕರಣದ ಇತ್ಯರ್ಥಕ್ಕಾಗಿ ಮೂಡಿಬಂದಿತು.

1. ದಿನಾಂಕ: 22.03.2019 ರಂದು ಮಧ್ಯಾಹ್ನ 1.40 ಗಂಟೆ ಸಮಯದಲ್ಲಿ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ್ದು, ಚಾಮರಾಜನಗರ ತಾಲ್ಲೂಕು, ಕಿಳಲೀಪುರ ಗ್ರಾಮದ ಸರ್ಕಾರಿ ಶಾಲೆಯ ಹತ್ತಿರ ಆರೋಪಿಯು ಯಾವುದೇ ರಹದಾರಿಯಿಲ್ಲದೇ ಅಕ್ರಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಸಲುವಾಗಿ 90 ಎಂಎಲ್ ನ 10 ಓರಿಜನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಹಾಗೂ 90 ಎಂ.ಎಲ್ ನ 20 ಹೈವಾರ್ಡ್ಸ್ ಚೀಯರ್ಸ್ ವಿಸ್ಕಿಯ ಮದ್ಯ ತುಂಬಿರುವ 20 ಪೌಚ್‌ಗಳನ್ನು ತನ್ನ ಕೈಯಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಹಿಡಿದುಕೊಂಡು ಸಾಗಾಣಿಕೆ ಮಾಡುತ್ತಿದ್ದುದು, ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965, ಕಲಂ.32, 34, ರಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿರುವುದಾಗಿ ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?
2. ಯಾವ ಆದೇಶ?

7. ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ : 1 :**ನಕಾರಾತ್ಮಕವಾಗಿ.**

ಅಂಶ ಸಂಖ್ಯೆ : 2 : ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

8. **ಅಂಶ ಸಂಖ್ಯೆ: 1** : ಅಭಿಯೊಜನೆಯವರು ಆರೋಪಿತರ ಮೇಲೆ ಇರುವ ಆರೋಪವನ್ನು ಸಾಬೀತು ಪಡಿಸಲು ಅಭಿಯೋಜನೆಯವರು ತಾವು ಹಾಜರು ಪಡಿಸಿದ ಸಾಕ್ಷಿದಾರರ ಪಟ್ಟಿಯಲ್ಲಿನ ತಮ್ಮ ಪರ ಫ್ರಾಸಾ 1 ರಿಂದ 5 ರವರೆಗೆ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿಕೊಂಡು, ನಿಪಿ 1 ರಿಂದ 7ರವರೆಗೆ ನಿಶಾನೆಗಳನ್ನಾಗಿ ಹಾಗೂ 30 ಮದ್ಯದ ಪೌಚುಗಳನ್ನು ಹಾಗೂ ಒಂದು ಪ್ಲಾಸ್ಟಿಕ್ ಕವರ್ ಮುದ್ದೆ ಮಾಲು-1 ರಿಂದ 31 ಎಂದು ಗುರುತಿಸಿಕೊಂಡಿದ್ದಾರೆ.

9. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ, ನಿಪಿ.1 ಚಾಸಾ-1 ರವರು ನೀಡಿದ ಸ್ವವರದಿಯಾಗಿರುತ್ತದೆ. ನಿಪಿ.2 ಸ್ಥಳ ಮಹಜರ್, ನಿಪಿ.3 ಮತ್ತು 4 ಹೇಳಿಕೆಗಳು, ನಿಪಿ.5 ಪ್ರ.ವ.ವರದಿಯಾಗಿರುತ್ತದೆ. ನಿಪಿ.6 ಮಾಲು ಪಟ್ಟಿ, ನಿಪಿ.7 ಎಫ್.ಎಸ್.ಎಲ್ ವರದಿಯಾಗಿರುತ್ತದೆ. ಸದರಿ ನಿಶಾನೆಗಳ ಬಗ್ಗೆ ಯಾವುದೇ ವಿವಾದಗಳು ಇರುವುದಿಲ್ಲ.

10. ಫ್ರಾಸಾ-2 ಮತ್ತು 3 ರವರು ಪಂಚರ ನಿಪಿ.1 ಸ್ಥಳ ಮಹಜರ್ ಜರುಗಿಸುವಾಗ ಪಂಚರ ಸಾಕ್ಷಿದಾರರಾಗಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ 1 ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ಮತ್ತು ಯಾವುದೇ ಮದ್ಯದ

ವಸ್ತುಗಳನ್ನು ಅಮಾನತ್ತು ಮಾಡಿಲ್ಲ ಹಾಗೂ ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಸ್ಥಳ ಮಹಜರನ್ನು ನಿಪಿ 1 ಎಂದು, ಸಹಿಗಳನ್ನು ನಿಪಿ1(ಬಿ) ಮತ್ತು 1(ಸಿ) ಎಂದು ಗುರುತಿಸಿಕೊಂಡಿದ್ದಾರೆ. ಮುದ್ದೆ ಮಾಲುಗಳನ್ನು ಗುರುತಿಸಿಕೊಂಡಿರುವುದಿಲ್ಲ .

**10(ಎ).** ನಂತರ ಅಭಿಯೋಜಕರು ಫ್ರಾಸಾ-2 ಮತ್ತು 3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಿವರವಾಗಿ ಪಾಟೀ ಸವಾಲು ಮಾಡಿದರು ಸಹಿತ ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ. ಸದರಿ ಸಾಕ್ಷಿದಾರರು ಸ್ವತಂತ್ರ ಪಂಚರ ಸಾಕ್ಷಿದಾರರಾಗಿದ್ದರೂ ನಿಪಿ.1 ರ ಅಂಶಗಳನ್ನು ನಿರಾಕರಿಸಿರುತ್ತಾರೆ. ಕಾರಣ ಇವರ ಸಾಕ್ಷ್ಯವು ಅಭಿಯೋಜನೆ ಪ್ರಕರಣಕ್ಕೆ ಬೆಂಬಲವಾಗಿರುವುದಿಲ್ಲ.

**11**. ಫ್ರಾಸಾ-1, ಮತ್ತು 3 ರವರು ರವರು ಫಿರ್ಯಾದುದಾರರು ಹಾಗೂ ದಾಳಿ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 22.03.2019 ರಂದು ಮಧ್ಯಾಹ್ನ ಸುಮಾರು 1.15 ಗಂಟೆಯ ವೇಳೆಗೆ ತಾವು ಚಾಸಾ-5 ರವರೊಂದಿಗೆ ಇಲಾಖಾ ವಾಹನದಲ್ಲಿ ಹರವೆ ಗ್ರಾಮದ ಕಡೆ ಗಸ್ತಿನಲ್ಲಿದ್ದ ಸಂದರ್ಭದಲ್ಲಿ, ಒಬ್ಬ ವ್ಯಕ್ತಿಯು ಕೀಳಲಿಪುರ ಗ್ರಾಮದ ಕಡೆಗೆ ಅಕ್ರಮವಾಗಿ ಮದ್ಯದ ಪೌಚ್‌ಗಳನ್ನು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ಭಾತ್ಮೀದಾರರಿಂದ ಮಾಹಿತಿ ಬಂದಿದ್ದು, ಈ ಮಾಹಿತಿಯನ್ನು ಪರಸ್ಪರ ಹಂಚಿಕೊಂಡು ಕೂಡಲೇ

ಕೀಳಲಿಪುರ ಗ್ರಾಮದ ಕಡೆಗೆ ತೆರಳಿದರೆಂದು ಇಬ್ಬರೂ ಸಾಕ್ಷಿದಾರರು ಒಂದೇ ರೀತಿಯಾಗಿ ಹೇಳಿಕೆ ನೀಡಿದ್ದಾರೆ. ಮಾರ್ಗ ಮಧ್ಯದಲ್ಲಿ ಪಂಚರಾದ ಚಾಸಾ-2 ಮತ್ತು 3 ರವರನ್ನು ಕರೆದು ವಿಷಯ ತಿಳಿಸಿ ಪಂಚರಾಗಿ ಬರುವಂತೆ ವಿನಂತಿಸಿದ್ದು, ಅವರು ಒಪ್ಪಿ ತಮ್ಮೊಂದಿಗೆ ಬಂದರು ಎಂದು ಸಹ ಇಬ್ಬರೂ ಸಾಕ್ಷಿದಾರರು ತಿಳಿಸಿದ್ದಾರೆ ಎಂದು ನುಡಿದಿರುತ್ತಾರೆ.

**11(ಎ).** ಮುಂದುವರಿದು, ಕೀಳಲಿಪುರ ಗ್ರಾಮಕ್ಕೆ ಮಧ್ಯಾಹ್ನ ಸುಮಾರು 1.30 ಗಂಟೆಗೆ ತಲುಪಿ ಸರ್ಕಾರಿ ಶಾಲೆಯ ಹಿಂಭಾಗದಲ್ಲಿ ಇಲಾಖಾ ಜೀಪನ್ನು ಮರೆಯಾಗಿ ನಿಲ್ಲಿಸಿ, ಶಾಲೆಯ ಮುಂಭಾಗದ ರಸ್ತೆಯಲ್ಲಿ ಕಾಯುತ್ತಿದ್ದಾಗ, ಒಬ್ಬ ವ್ಯಕ್ತಿಯು ಕೈಯಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಹಿಡಿದು ನಡೆದುಕೊಂಡು ಬರುತ್ತಿರುವುದನ್ನು ಕಂಡು ಆತನನ್ನು ಸುತ್ತುವರೆದು ಹಿಡಿದು ವಿಚಾರಿಸಿದಾಗ, ಆತ ತನ್ನ ಹೆಸರು ನಾಗಪ್ಪ ಬಿನ್ ಸಿದ್ದಪ್ಪ, ಕೀಳಲಿಪುರ ಗ್ರಾಮ ಎಂದು ತಿಳಿಸಿದ್ದಾನೆ ಎಂದು ಇಬ್ಬರೂ ಸಾಕ್ಷಿದಾರರು ಹೇಳಿದ್ದಾರೆ. ಬಳಿಕ ಆತನ ಕೈಯಲ್ಲಿದ್ದ ಪ್ಲಾಸ್ಟಿಕ್ ಕವರ್ ಪರಿಶೀಲಿಸಿದಾಗ, ಅದರಲ್ಲಿ 90 ಎಂ.ಎಲ್. ಸಾಮರ್ಥ್ಯದ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 10 ಟೆಟ್ರಾಪ್ಯಾಕ್‌ಗಳು ಹಾಗೂ 90 ಎಂ.ಎಲ್. ಸಾಮರ್ಥ್ಯದ ಹೈವಾರ್ಡ್ಸ್ ಚಿಯರ್ಸ್ ವಿಸ್ಕಿಯ 20 ಟೆಟ್ರಾಪ್ಯಾಕ್‌ಗಳು ಪತ್ತೆಯಾಗಿದ್ದು, ಸದರಿ ಮದ್ಯವನ್ನು ಇಟ್ಟುಕೊಳ್ಳಲು ಆರೋಪಿಯ ಬಳಿ ಯಾವುದೇ ಪರವಾನಗಿ ಇಲ್ಲವೆಂದು ತಿಳಿದುಬಂದ ಕಾರಣ,

ಪಂಚರ ಸಮಕ್ಷಮ ಮಧ್ಯಾಹ್ನ 1.50 ಗಂಟೆಯಿಂದ 2.50 ಗಂಟೆಯವರೆಗೆ ಮಹಜರ್ ಜರುಗಿಸಿ ಮದ್ಯದ ಪೌಚ್‌ಗಳನ್ನು ಅಮಾನತ್ತುಪಡಿಸಿಕೊಂಡು ಬಿಳಿ ಬಟ್ಟೆಯ ಚೀಲದಲ್ಲಿ ಪ್ರತ್ಯೇಕವಾಗಿ ಹಾಕಿ ಇಂಗ್ಲಿಷ್ "J" ಅಕ್ಷರದ ಸೀಲು ಹಾಕಲಾಯಿತು ಎಂದು ಇಬ್ಬರೂ ಸಾಕ್ಷಿದಾರರು ಸಮಾನವಾಗಿ ನುಡಿದಿರುತ್ತಾರೆ. ಅಲ್ಲದೆ, ನಂತರ ಆರೋಪಿ ಹಾಗೂ ಜಪ್ತಿ ಮಾಲನ್ನು ಠಾಣೆಗೆ ಹಾಜರುಪಡಿಸಿ ಮುಂದಿನ ಕ್ರಮಕ್ಕಾಗಿ ಸಂಬಂಧಪಟ್ಟ ಅಧಿಕಾರಿಗೆ ಒಪ್ಪಿಸಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ.

**11(ಬಿ).** ನಂತರ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಫ್ರಾಸಾ-1 ರವರು ಪಂಚರಿಗೆ ತಾವು ಯಾವುದೇ ಲಿಖಿತ ನೋಟೀಸ್ ನೀಡಿಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ಪಂಚರಲ್ಲಿ ಒಬ್ಬರು ಹೊನ್ನಹಳ್ಳಿ ಗ್ರಾಮದವರೂ, ಮತ್ತೊಬ್ಬರು ಕಾಳನಹುಂಡಿ ಗ್ರಾಮದವರೂ ಆಗಿದ್ದು, ಅವರು ಸ್ಥಳೀಯ ಪಂಚರಲ್ಲ ಎಂಬುದನ್ನು ಸಹ ಒಪ್ಪಿಕೊಂಡಿರುತ್ತಾರೆ. ಪಂಚರು ಸ್ಥಳದಲ್ಲಿದ್ದ ಉದ್ದೇಶವನ್ನು ಮಹಜರ್‌ನಲ್ಲಿ ನಮೂದಿಸಲು ಯಾವುದೇ ತೊಂದರೆ ಇರಲಿಲ್ಲ ಹಾಗೂ ನಿಪಿ-2 ಮಹಜರ್‌ನ ಆರಂಭದಲ್ಲಿ ಪಂಚರ ಹೆಸರು ಹಾಗೂ ವಿವರಗಳನ್ನು ದಾಖಲಿಸಿಲ್ಲ ಎಂಬುದನ್ನೂ ಒಪ್ಪಿಕೊಂಡಿರುತ್ತಾರೆ.

**11(ಸಿ).** ಮುಂದುವರಿದು, ಮಹಜರ್ ನಡೆಸುವ ಸಂದರ್ಭದಲ್ಲಿ ಯಾವುದೇ ಫೋಟೋ ಅಥವಾ ವಿಡಿಯೋ ದಾಖಲಾತಿ ಮಾಡಿಲ್ಲ, ಘಟನಾ ಸ್ಥಳವಾದ ಸರ್ಕಾರಿ

ಶಾಲೆಯ ಮುಂಭಾಗದಲ್ಲಿ ಸಾರ್ವಜನಿಕರ ಸಂಚಾರ ಇರುತ್ತದೆ ಹಾಗೂ ಸ್ಥಳೀಯರನ್ನು ಪಂಚರನ್ನಾಗಿ ಮಾಡಿಕೊಳ್ಳಲು ಯಾವುದೇ ಅಡ್ಡಿ ಇರಲಿಲ್ಲ ಎಂದು ಸಹ ಒಪ್ಪಿಕೊಂಡಿರುತ್ತಾರೆ. ಇದಲ್ಲದೆ, ತಾವು ಸದರಿ ದಿನ ಗಸ್ತಿನಲ್ಲಿದ್ದ ಬಗ್ಗೆ ಠಾಣೆಯ ದಿನಚರಿಯಲ್ಲಿ ದಾಖಲಿಸಿದ್ದರೂ, ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ಸಹ ಒಪ್ಪಿಕೊಂಡಿರುತ್ತಾರೆ. ಈ ಎಲ್ಲ ಒಪ್ಪಿಕೆಗಳು ತನಿಖೆಯ ಪಾರದರ್ಶಕತೆ, ಸ್ವತಂತ್ರ ಪಂಚರ ಲಭ್ಯತೆ ಹಾಗೂ ದಾಖಲೆಗಳ ಸಮರ್ಪಕ ನಿರ್ವಹಣೆ ಕುರಿತು ಅನುಮಾನ ಮೂಡಿಸುವ ಸ್ವರೂಪದ್ದಾಗಿವೆ. ಫ್ರಾಸಾ-4 ರವರು ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**12**. ಫ್ರಾಸಾ-5 ರವರು ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು ಹಾಗೂ ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 22.03.2019 ರಂದು ಮಧ್ಯಾಹ್ನ ಸುಮಾರು 3.20 ಗಂಟೆಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-1 ರವರಿಂದ ಕಂಪ್ಯೂಟರ್ ಮುದ್ರಿತ ಸ್ವ-ವರದಿಯನ್ನು ಸ್ವೀಕರಿಸಿದುದಾಗಿ ನುಡಿದಿರುತ್ತಾರೆ. ಸದರಿ ಸ್ವ-ವರದಿಯ ಆಧಾರದ ಮೇಲೆ ಠಾಣೆ ಮೊಕದ್ದಮೆ ಸಂ.76/2019 ಅನ್ನು ಕಲಂ 32 ಮತ್ತು 34 ರಡಿಯಲ್ಲಿ ದಾಖಲಿಸಿ, ಪ್ರಥಮ ವರ್ತಮಾನ ವರದಿ ಯನ್ನು ತಯಾರಿಸಿ ಅದೇ ದಿನ ಘನ ನ್ಯಾಯಾಲಯಕ್ಕೆ ಸಲ್ಲಿಸಿದ್ದಾಗಿ ತಿಳಿಸಿದ್ದಾರೆ.

**12(ಎ).** ನಂತರ ಸ್ಥಳ ಮಹಜರ್, ಜಪ್ತಿ ಮುದ್ದೆಮಾಲುಗಳನ್ನು ಸ್ವೀಕರಿಸಿ, ಮಾಲುಪಟ್ಟಿ ಸಂ.79/2019 ರೀತ್ಯಾ ಘನ ನ್ಯಾಯಾಲಯಕ್ಕೆ ಸಲ್ಲಿಸಿ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಫ್ರಾಸಾ-5 ರವರು ಮುಂದುವರಿದು, ಪ್ರಕರಣದ ತನಿಖೆಯ ಭಾಗವಾಗಿ ಆರೋಪಿಯನ್ನು ನಿಯಮಾನುಸಾರ ದಸ್ತಗಿರಿ ಮಾಡಿ, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನದಂತೆ ಸೂಕ್ತ ಜಾಮೀನು ಪಡೆದು ಬಿಡುಗಡೆ ಮಾಡಿರುವುದಾಗಿ ತಿಳಿಸಿದ್ದಾರೆ. ಬಳಿಕ ಪ್ರಕರಣದ ಸಾಕ್ಷಿದಾರರಾದ ಚಾಸಾ-4 ರಿಂದ ಚಾಸಾ-6 ರವರ ಹೇಳಿಕೆಗಳನ್ನು ದಾಖಲಿಸಿ ತನಿಖಾ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ಹಾಗೂ ಜಪ್ತಿ ಮಾಡಿದ ಮುದ್ದೆಮಾಲುಗಳನ್ನು ಪರೀಕ್ಷೆಗಾಗಿ ಆರ್.ಎಫ್.ಎಸ್.ಎಲ್., ಮೈಸೂರಿಗೆ ಕಳುಹಿಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ 29.05.2019 ರಂದು ಎಫ್.ಎಸ್.ಎಲ್. ವರದಿಯನ್ನು ಸ್ವೀಕರಿಸಿ ಅದನ್ನು ತನಿಖಾ ಕಡತಕ್ಕೆ ಸೇರಿಸಿಕೊಂಡು, ತನಿಖೆ ಪೂರ್ಣಗೊಳಿಸಿದ ನಂತರ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುವುದಾಗಿ ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ನಂತರ ಆರೋಪಿ ಪರ ವಕೀಲರು ಪಾಟೀ ಸವಾಲಿನಲ್ಲಿ ಮಾಡಿದ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**13**. ಮೇಲಿನ ಸಾಕ್ಷ್ಯಾಧಾರಗಳನ್ನು ಮತ್ತು ದಾಖಲೆಗಳನ್ನು ಸಮಗ್ರವಾಗಿ ಪರಿಶೀಲಿಸಿದಾಗ, ಅಭಿಯೋಜನೆಯವರು ಆರೋಪಿಯ ವಿರುದ್ಧದ ಆರೋಪವನ್ನು ಸಾಬೀತುಪಡಿಸುವ ಹೊಣೆಯನ್ನು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ನಿರ್ವಹಿಸಬೇಕಾಗಿರುತ್ತದೆ. ಆದರೆ, ಈ ಪ್ರಕರಣದಲ್ಲಿ ಅಭಿಯೋಜನೆಯವರು ಅವಲಂಬಿಸಿರುವ ಜಪ್ತಿ ಮಹಜರ್‌ಗೆ ಸಂಬಂಧಿಸಿದ ಸ್ವತಂತ್ರ ಪಂಚ ಸಾಕ್ಷಿದಾರರಾದ ಫ್ರಾಸಾ-2 ಮತ್ತು ಫ್ರಾಸಾ-3 ರವರು ಅಭಿಯೋಜನೆ ಪ್ರಕರಣಕ್ಕೆ ಸಂಪೂರ್ಣವಾಗಿ ಬೆಂಬಲ ನೀಡಿಲ್ಲ. ಅವರು ನಿಪಿ-2 ಮಹಜರ್‌ಗೆ ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದು, ಅದರಲ್ಲಿನ ವಿಷಯ ತಿಳಿದಿಲ್ಲ, ತಮ್ಮ ಎದುರು ಯಾವುದೇ ಮದ್ಯವನ್ನು ಜಪ್ತಿ ಮಾಡಿಲ್ಲ ಹಾಗೂ ಪೊಲೀಸರು ತಮ್ಮಿಂದ ಯಾವುದೇ ಹೇಳಿಕೆ ಪಡೆದಿಲ್ಲ ಎಂದು ಸ್ಪಷ್ಟವಾಗಿ ಸಾಕ್ಷ್ಯ ನುಡಿದಿದ್ದಾರೆ. ಅವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀಸವಾಲು ನಡೆಸಿದರೂ ಸಹ, ಅಭಿಯೋಜನೆಗೆ ಅನುಕೂಲವಾಗುವ ಯಾವುದೇ ಅಂಶವನ್ನು ಒಪ್ಪಿಕೊಂಡಿಲ್ಲ. ಹೀಗಾಗಿ ಜಪ್ತಿ ಮಹಜರ್‌ಗೆ ಸ್ವತಂತ್ರ ಸಾಕ್ಷಿಗಳಿಂದ ಯಾವುದೇ ದೃಢೀಕರಣ ದೊರೆತಿಲ್ಲ.

**14.** ಫ್ರಾಸಾ-1 ಮತ್ತು ಫ್ರಾಸಾ-4 ರವರ ಸಾಕ್ಷ್ಯವು ಪ್ರಕರಣದ ಸಂಪೂರ್ಣ ಆಧಾರವಾಗಿದ್ದರೂ, ಇಬ್ಬರೂ ಪೊಲೀಸ್ ಅಧಿಕಾರಿಗಳಾಗಿದ್ದು ಅಧಿಕೃತ ಸಾಕ್ಷಿದಾರರಾಗಿರುತ್ತಾರೆ. ಇವರ ಸಾಕ್ಷ್ಯವನ್ನು ಕೇವಲ ಪೊಲೀಸ್ ಅಧಿಕಾರಿಗಳ

ಸಾಕ್ಷ್ಯವೆಂಬ ಕಾರಣಕ್ಕೆ ತಿರಸ್ಕರಿಸಲಾಗುವುದಿಲ್ಲ. ಆದರೆ, ಅವರ ಸಾಕ್ಷ್ಯವು ವಿಶ್ವಾಸಾರ್ಹ ಹಾಗೂ ಇತರೆ ಸ್ವತಂತ್ರ ಸಾಕ್ಷಿ ಅಥವಾ ಸನ್ನಿವೇಶಗಳಿಂದ ದೃಢೀಕರಿಸಲ್ಪಟ್ಟಿರಬೇಕು. ಪ್ರಸ್ತುತ ಪ್ರಕರಣದಲ್ಲಿ ಅಂತಹ ದೃಢೀಕರಣ ಲಭ್ಯವಾಗಿರುವುದಿಲ್ಲ. ಇದಲ್ಲದೆ, ಫ್ರಾಸಾ-1 ರವರು ಪಾಟೀಸವಾಲಿನಲ್ಲಿ ಪಂಚರಿಗೆ ಯಾವುದೇ ಲಿಖಿತ ನೋಟೀಸ್ ನೀಡಿಲ್ಲ, ಸ್ಥಳೀಯರನ್ನು ಪಂಚರನ್ನಾಗಿ ಮಾಡಿಕೊಳ್ಳಲು ಯಾವುದೇ ಅಡ್ಡಿ ಇರಲಿಲ್ಲ, ಆದರೂ ಸ್ಥಳೀಯರನ್ನು ಪಂಚರನ್ನಾಗಿ ಮಾಡಿಕೊಂಡಿಲ್ಲ, ಮಹಜರ್ ಸಮಯದಲ್ಲಿ ಯಾವುದೇ ಫೋಟೋ ಅಥವಾ ವಿಡಿಯೋ ದಾಖಲಾತಿ ಮಾಡಿಲ್ಲ, ಗಸ್ತು ಕರ್ತವ್ಯಕ್ಕೆ ಸಂಬಂಧಿಸಿದ ಠಾಣೆ ದಿನಚರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಗೂ ಮಹಜರ್‌ನಲ್ಲಿ ಪಂಚರ ವಿವರಗಳನ್ನು ಆರಂಭದಲ್ಲಿಯೇ ದಾಖಲಿಸಿಲ್ಲ ಎಂದು ಒಪ್ಪಿಕೊಂಡಿರುವುದು ತನಿಖೆಯ ಪಾರದರ್ಶಕತೆಯ ಬಗ್ಗೆ ನ್ಯಾಯಾಲಯದಲ್ಲಿ ಸಮಂಜಸವಾದ ಅನುಮಾನವನ್ನು ಉಂಟುಮಾಡುತ್ತದೆ.

**15.** ಘಟನಾ ಸ್ಥಳವು ಸರ್ಕಾರಿ ಶಾಲೆಯ ಮುಂಭಾಗದ ಸಾರ್ವಜನಿಕ ಸಂಚಾರವಿರುವ ಸ್ಥಳವಾಗಿದ್ದು, ಅಂತಹ ಸ್ಥಳದಲ್ಲಿ ಸ್ವತಂತ್ರ ಸ್ಥಳೀಯ ಸಾಕ್ಷಿದಾರರನ್ನು ಪಂಚರನ್ನಾಗಿ ಮಾಡಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂಬುದನ್ನು ಫ್ರಾಸಾ-1 ರವರೇ ಒಪ್ಪಿಕೊಂಡಿದ್ದಾರೆ. ಆದಾಗ್ಯೂ ತನಿಖಾಧಿಕಾರಿಗಳು ಸ್ಥಳೀಯ ಸಾರ್ವಜನಿಕರನ್ನು ಪಂಚರನ್ನಾಗಿ ಮಾಡಿಕೊಳ್ಳದೆ ಬೇರೆ ಗ್ರಾಮದವರನ್ನು ಪಂಚರನ್ನಾಗಿ

ಮಾಡಿಕೊಂಡಿರುವುದಕ್ಕೆ ಸಮರ್ಪಕ ಕಾರಣವನ್ನು ಅಭಿಯೋಜನೆಯವರು ನೀಡಿರುವುದಿಲ್ಲ. ಇಂತಹ ಲೋಪಗಳು ಜಪ್ತಿ ಪ್ರಕ್ರಿಯೆಯ ವಿಶ್ವಾಸಾರ್ಹತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ.

**16.** ಎಫ್.ಎಸ್.ಎಲ್. ವರದಿಯಿಂದ ಜಪ್ತಿ ಮಾಡಲಾದ ವಸ್ತುಗಳು ಮದ್ಯವೆಂಬುದು ದೃಢಪಟ್ಟಿದ್ದರೂ, ಆರೋಪಿಯ ಬಳಿಯಿಂದಲೇ ಸದರಿ ಮದ್ಯವನ್ನು ಕಾನೂನುಬದ್ಧವಾಗಿ ಜಪ್ತಿ ಮಾಡಲಾಗಿದೆ ಎಂಬ ಮೂಲಭೂತ ಅಂಶವನ್ನು ಅಭಿಯೋಜನೆಯವರು ಮೊದಲು ವಿಶ್ವಾಸಾರ್ಹ ಸಾಕ್ಷಿಗಳ ಮೂಲಕ ಸಾಬೀತುಪಡಿಸಬೇಕಾಗಿರುತ್ತದೆ. ಜಪ್ತಿಯೇ ಅನುಮಾನಾಸ್ಪದವಾಗಿರುವ ಸಂದರ್ಭದಲ್ಲಿ ಎಫ್.ಎಸ್.ಎಲ್. ವರದಿ ಮಾತ್ರದಿಂದ ಆರೋಪಿಯ ಅಪರಾಧವನ್ನು ಸಾಬೀತುಪಡಿಸಲಾಗಿದೆ ಎಂದು ಹೇಳಲಾಗುವುದಿಲ್ಲ.

**17.** ಕ್ರಿಮಿನಲ್ ನ್ಯಾಯಶಾಸ್ತ್ರದ ಮೂಲ ತತ್ವದಂತೆ, ಅಭಿಯೋಜನೆಯವರು ಆರೋಪವನ್ನು ಎಲ್ಲಾ ನ್ಯಾಯಸಮ್ಮತ ಸಂದೇಹಗಳನ್ನು ಮೀರಿ ಸಾಬೀತುಪಡಿಸಬೇಕಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಸ್ವತಂತ್ರ ಪಂಚ ಸಾಕ್ಷಿದಾರರು ಅಭಿಯೋಜನೆಗೆ ಬೆಂಬಲ ನೀಡದಿರುವುದು, ತನಿಖೆಯಲ್ಲಿನ ಮೇಲ್ಕಂಡ ಲೋಪಗಳು ಹಾಗೂ ಜಪ್ತಿ ಪ್ರಕ್ರಿಯೆಯ ಕುರಿತು ಉಂಟಾಗಿರುವ ಅನುಮಾನಗಳ ಹಿನ್ನೆಲೆಯಲ್ಲಿ,

ಆರೋಪಿಯ ವಿರುದ್ಧದ ಆರೋಪವು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಸಾಬೀತಾಗಿಲ್ಲ ಎಂಬ ಅಭಿಪ್ರಾಯಕ್ಕೆ ನ್ಯಾಯಾಲಯ ಬರುತ್ತದೆ.

**18.** ಈ ಎಲ್ಲಾ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದಾಗ, ಘಟನೆಯ ನಿಖರತೆ, ಸ್ವತಂತ್ರ ಸಾಕ್ಷಿದಾರರ ಬೆಂಬಲದ ಕೊರತೆ ಹಾಗೂ ದೂರಿನ ಪ್ರಾಮಾಣಿಕತೆ ಬಗ್ಗೆ ನ್ಯಾಯಾಲಯಕ್ಕೆ ಗಂಭೀರ ಶಂಕೆ ಉಂಟಾಗಿದೆ. ಕ್ರಿಮಿನಲ್ ನ್ಯಾಯತಂತ್ರದಲ್ಲಿ ಸಂಶಯದ ಲಾಭವನ್ನು ಆರೋಪಿಗೆ ನೀಡಬೇಕೆಂಬುದು ಸುಪ್ರಸಿದ್ಧ ತತ್ವವಾಗಿದೆ. ಹೀಗಾಗಿ, ಆರೋಪಿ ವಿರುದ್ಧ ಅಭಿಯೋಜಕರು ಹೊರಡಿಸಿರುವ ಆಪಾದನೆಗಳನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲರಾಗಿದ್ದಾರೆಂದು ತೀರ್ಮಾನಿಸಿ, ಮೇಲ್ಕಂಡ ಅಂಶ ಸಂಖ್ಯೆ-1 ಕ್ಕೆ **ನಕಾರಾತ್ಮಕವಾಗಿ** ಉತ್ತರಿಸಲಾಗುತ್ತದೆ.

19. **ಅಂಶ ಸಂಖ್ಯೆ 2**: ಈ ಮೇಲ್ಕಂಡ ಅಂಶಗಳಲ್ಲಿ ಚರ್ಚಿಸಲಾದ ಕಾರಣಗಳಿಗಾಗಿ ಈ ಅಂತಿಮ ಆದೇಶ ಈ ಕೆಳಕಂಡಂತೆಃ-

# ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 1973 ಕಲಂ 248(1) ರಡಿಯಲ್ಲಿ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ.32 34 ರಡಿಯಲ್ಲಿ ಹೂಡಲಾದ ಅಪಾದನೆಗಳಿಂದ ದೋಷಮುಕ್ತಗೊಳಿಸಿ ಖುಲಾಸೆ ಮಾಡಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರಿಂದ ಸಲ್ಲಿಸಲಾದ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಪಡಿಸಲಾಗಿದೆ.

ಈ ಪ್ರಕರಣದಲ್ಲಿ ಗುರುತಿಸಲಾದ ಮುದ್ದೆಮಾಲುಗಳು ಯಾವುದೇ ಮೌಲ್ಯಯುತ ವಸ್ತುಗಳಲ್ಲದ ಕಾರಣ, ಮೇಲ್ಮನವಿಯ ಅವಧಿ ಮುಗಿದ ನಂತರ ಅವುಗಳನ್ನು ನಾಶಪಡಿಸಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 02**ನೇ ಜುಲೈ** 2026 ರಂದು ಘೋಷಿಸಿದ್ದೇನೆ.)

**(ಶ್ರೀ ಪ್ರಕಾಶ್. ಸಿ.ಡಿ )**
**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ ಜೆ ಎಂ.**
**ಚಾಮರಾಜನಗರ**

:: **ಅನುಬಂಧ** ::

1. **ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು** :

ಪ್ರಾಸಾ−1 : ಎಸ್.ಎಸ್ ರವಿಕಿರಣ
ಪ್ರಾಸಾ−2 : ಸುರೇಶ
ಪ್ರಾಸಾ−3 : ಮಂಜೇಶ
ಪ್ರಾಸಾ−4 : ಮಹದೇವಸ್ವಾಮಿ ಜಿ
ಪ್ರಾಸಾ−5 : ನಾಗಮಹದೇವ

2. **ಅಭಿಯೋಜನಾ ಪರ ಹಾಜರು ಪಡಿಸಿದ ದಾಖಲೆಗಳು :**

| | | |
|---|---|---|
| ನಿಶಾನೆ ಪಿ–1 | : | ಸ್ವ ವರದಿ |
| ನಿಶಾನೆ ಪಿ–1(ಎ ಮತ್ತು ಬಿ) | : | ಸಹಿಗಳು. |
| ನಿಶಾನೆ ಪಿ–2 | : | ಸ್ಥಳ ಮಹಜರ್ |
| ನಿಶಾನೆ ಪಿ–2(ಎ ರಿಂದ ಇ) | : | ಸಹಿಗಳು |
| ನಿಶಾನೆ ಪಿ–3 ಮತ್ತು 4 | : | ಹೇಳಿಕೆಗಳು |
| ನಿಶಾನೆ ಪಿ–5 | : | ಪ್ರ.ವ.ವರದಿ |
| ನಿಶಾನೆ ಪಿ–6 | : | ಮಾಲು ಪಟ್ಟಿ |
| ನಿಶಾನೆ ಪಿ–6(ಎ ಮತ್ತು ಬಿ) | : | ಸಹಿಗಳು |
| ನಿಶಾನೆ ಪಿ–7 | : | ಆರ್.ಎಫ್.ಎಸ್.ಎಲ್ ವರದಿ |
| ನಿಶಾನೆ ಪಿ–7(ಎ) | : | ಸಹಿ |

3. **ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು :**

–ಇಲ್ಲಾ–

4. **ಆರೋಪಿ ಪರ ಹಾಜರುಪಡಿಸಿದ ದಾಖಲೆಗಳು :**

–ಇಲ್ಲಾ–

5. **ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆಮಾಲು ಪಟ್ಟಿ :**

ಮುದ್ದೆ ಮಾಲು 1 ರಿಂದ 31 : ಮದ್ಯದ ಪೌಚುಗಳು ಮತ್ತು ಪ್ಲಾಸ್ಟಿಕ್ ಕವರ್

**ಪ್ರಧಾನ ಹಿರಿಯ ಸಿವಿಲ್ ಜಡ್ಜ್**
**ಮತ್ತು ಸಿ ಜೆ ಎಂ. ಚಾಮರಾಜನಗರ**

Visit **ecourts.gov.in** for updates or download mobile app “**eCourts Services**” from Android or iOS